# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

## ಸಿಸಿ ಸಂಖ್ಯೆ: 1106/2020

| | | |
|---|---|---|
| ಹೆಸರು | : | ಕಾರ್ತಿಕ್ |
| ತಂದೆಯ ಹೆಸರು | : | ರವಿಚಂದ್ರ ಎನ್ ಶೆಟ್ಟಿ |
| ಪ್ರಾಯ | : | 22  ವರ್ಷ |
| ಉದ್ಯೋಗ | : | ಹೆಚ್.ಆರ್ |
| ವಾಸ | : | ಸವಣಾಲು,  ಬೆಳ್ತಂಗಡಿ ತಾಲೂಕು |

**ದಿನಾಂಕ 04.11.2024 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ತಕ್ಷೀರು ಆಗುವಾಗ ನಾನು ಇರಲಿಲ್ಲ. ತಕ್ಷೀರು ಆಗಿ 5 ದಿನಗಳ ನಂತರ ಬಗ್ಗೆ ವಿಡಿಯೋ ಮೇಲೆ ತಕ್ಷೀರಿನ ಬಗ್ಗೆ ಗೊತ್ತಾಗಿರುತ್ತದೆ. ತಕ್ಷೀರು ಆಗುವಾಗ ನಾನು ಸ್ಥಳದಲ್ಲಿ ಇರಲಿಲ್ಲ. ಆಸ್ಪತ್ರೆಯಲ್ಲಿ ಪೊಲೀಸರು ಕೇಳಿದಾಗ ವಿಡಿಯೋದಲ್ಲಿ ಏನೆಲ್ಲಾ ನೋಡಿದ್ದೆ ಅದನ್ನು ಹೇಳಿರುತ್ತೇನೆ. ಅದನ್ನು ಹೊರತುಪಡಿಸಿ ಬೇರೆ ಏನು ನನಗೆ ಗೊತ್ತಿಲ್ಲ. ನಾನು ನೋಡಿದ ವಿಡಿಯೋದಲ್ಲಿ 1ನೇ ಆರೋಪಿ ಅಜ್ಜಿಗೆ ಹಲ್ಲೆ ಮಾಡಿರುವುದು ಸ್ಪಷ್ಟವಾಗಿ ಕಾಣುತ್ತಿತ್ತು. 2ನೇ ಆರೋಪಿ ಯಾವುದೇ ರೀತಿ ಹಲ್ಲೆ ಮಾಡಿರುವುದು ಕಂಡಿರುವುದಿಲ್ಲ ಆದರೆ ಪ್ರತ್ಯಕ್ಷವಾಗಿ ಅಲ್ಲೆ ಇದ್ದರೂ ಅದನ್ನು ನಿಲ್ಲಿಸಬಹುದಾಗಿತ್ತು. ಆ ವಿಡಿಯೋದಲ್ಲಿ ಅಜ್ಜಿ ಕಿರಿಚಿರುವುದು ಗೊತ್ತಾಗಿರುತ್ತದೆ, ಮಾತನಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ವಿಡಿಯೋವನ್ನು ಯಾರು ಮಾಡಿದ್ದಾರೆ ಎಂದು ಗೊತ್ತಿಲ್ಲ. ಸಾಕ್ಷಿಗೆ ನಿಪಿ4ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ನನ್ನ ಸಹಿ ಅಲ್ಲ ಎಂದು ನಿರಾಕರಿಸಿರುತ್ತಾರೆ.  ಆದ ಕಾರಣ ಸದರಿ ಸಹಿಯನ್ನು ಗುರುತಿಸಿರುವುದಿಲ್ಲ. 2ನೇ ಆರೋಪಿ ನನ್ನ ದೊಡ್ಡಪ್ಪ ಅಂದರೆ ನನ್ನ ತಂದೆಯ ಅಣ್ಣ. ಅದೇ ರೀತಿ ಚಾಸಾ2 ರವರು ನನ್ನ ಅಜ್ಜಿ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ಚಾಸಾ2 ರವರು ವಯೋವೃದ್ಧರಾಗಿದ್ದು, 2ನೇ ಆರೋಪಿಯ ಮನೆಯಲ್ಲಿ ಹಾರೈಕೆಯಲ್ಲಿ ಇದ್ದರು ಎಂದರೆ ಸರಿ. ನಾನು ಯಾವಾಗಲಾದರೂ 2ನೇ ಆರೋಪಿಯ ಮನೆಗೆ ಹೋಗಿ ಆಕೆಯ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬರುತ್ತಿದ್ದೆ ಎಂದರೆ ಸರಿ. 2ನೇ ಆರೋಪಿಯ ಹೆಂಡತಿಯ ಸಂಬಂಧಿ 1ನೇ ಆರೋಪಿ ಒಂದು ತಿಂಗಳ ಹಿಂದೆ 2ನೇ ಆರೋಪಿಯ ಮನೆಯಲ್ಲಿರುವ ವಿಚಾರ ನನಗೆ ತಿಳಿಯಿತು ಎಂದರೆ ಸರಿಯಲ್ಲ. 1ನೇ ಆರೋಪಿ ಪದೇ ಪದೇ ಮಧ್ಯಪಾನ ಮಾಡುವ ಚಟ ಹೊಂದಿದ್ದರು ಎಂದರೆ ಸರಿ. ದಿಃ 17.7.2020 ರಂದು ನಾನು ನನ್ನ ಅಜ್ಜಿಯನ್ನು ವಿಚಾರಿಸಲು 2ನೇ ಆರೋಪಿಯ ಮನೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ಆಗ ಚಾಸಾ2 ರವರು ಒಬ್ಬರೇ ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಚಾಸಾ2 ರವರ ಹಣೆಯಲ್ಲಿ ತರಚಿದ ಗಾಯ ಇರುವುದನ್ನು ನೋಡಿ ನನ್ನ ತಂದೆಯವರು ವಿಚಾರಿಸಿದಾಗ ಚಾಸಾ2 ರವರು ಮಧ್ಯಾಹ್ನ 2 ಗಂಟೆಯ ಸಮಯಕ್ಕೆ ತಾನು ಮಲಗಿದ್ದಾಗ ಊಟ ಮಾಡಲೆಂದು ಏಳಲು ಪ್ರಯತ್ನಿರುವಾಗಿ 1ನೇ ಆರೋಪಿ ಚಾಸಾ2 ರವರು ಇದ್ದಲ್ಲಿಗೆ ಬಂದು ಅವರು ಏಳದಂತೆ ತಡೆದು ನಿಲ್ಲಿಸಿ ಮೇಲಕ್ಕೆ ಎತ್ತಿ ಕೆಳಕ್ಕೆ ಹಾಕಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಅವರು ಜೋರಾಗಿ ಬೊಬ್ಬೆ ಹೊಡೆದಾಗ 2ನೇ ಆರೋಪಿ ಬಂದು ಆತನ ಕೈಯಿಂದ ಚಾಸಾ2 ರವರ ಬಲಭುಜಕ್ಕೆ ಹೊಡೆದು ಅವಾಚ್ಯವಾಗಿ ಅವರನ್ನು ಉದ್ದೇಶಿಸಿ ನೀನು ಎಲ್ಲಿಗೆ ಸಾಯಲು ಹೋಗುತ್ತೀಯಾ ಎಂದು ಬೈದಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2ನೇ ಆರೋಪಿತರು ಹೊಡೆಯುವ ಸಮಯ ಚಾಸಾ4 ರವರು ಸ್ಥಳಕ್ಕೆ ಬಂದಿದ್ದು ಅವರು ತಮ್ಮ ಮೊಬೈಲ್ ನಲ್ಲಿ ಆರೋಪಿತರು ಚಾಸಾ2 ರವರಿಗೆ ಹಲ್ಲೆ ಮಾಡುವ ಫೋಟೋ ತೆಗೆದಿರುತ್ತಾರೆ ಎಂದರೆ ಗೊತ್ತಿಲ್ಲ. ನಂತರ ಚಾಸಾ4 ರವರು ಆರೋಪಿತರನ್ನು ಬಿಡಿಸಿರುತ್ತಾರೆ ಎಂದು ಚಾಸಾ2 ರವರು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಚಾಸಾ2 ರವರನ್ನು ಹಾರೈಕೆ ಮಾಡಿ ನೋಡಲಾಗಿ ಹಣೆಗೆ ತರಚಿದ ಗಾಯ, ಬೆನ್ನಿಗೆ, ಬಲಭುಜ ಮತ್ತು ಬಲಕೈಗೆ ಕಂದಿದ ಗಾಯ ಆಗಿತ್ತು ಎಂದರೆ ಸಾಕ್ಷಿ ವಿಡಿಯೋ ನೋಡಿ 5 ದಿನಗಳ ನಂತರ ನೋಡಿದಾಗ ಇತ್ತು ಎಂದು ಹೇಳುತ್ತಾರೆ. ದಿಃ 17.7.2020 ರಂದು ಚಾಸಾ2 ರವರು ವಿಚಾರಿಸಲು ಹೋದಾಗ ಚಾಸಾ2 ರವರು 1 ಮತ್ತು 2ನೇ ಆರೋಪಿತರು ಹಲ್ಲೆ

ನಡೆಸಿದ ಕಾರಣ ಆದ ನೋವಿನಿಂದ ಅವರನ್ನು ಚಿಕಿತ್ಸೆಗೆ ಬೆಳ್ತಂಗಡಿ ಅಭಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಒಳರೋಗಿಯಾಗಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ವಿಡಿಯೋ ನೋಡಿ 5 ದಿನಗಳ ನಂತರ ಯಾರೋ ಆಂಬ್ಯುಲೆನ್ಸ್ ನ್ನು ಕಳುಹಿಸಿರುತ್ತಾರೆ, ಆ ಸಮಯದಲ್ಲಿ ಚಾಸಾ2 ರವರ ಜೊತೆ ಹೋಗಿರುತ್ತೇನೆ ಎಂದು ಹೇಳುತ್ತಾರೆ. ಆರೋಪಿತರು ಚಾಸಾ2 ರವರಿಗೆ ಹಲ್ಲೆ ನಡೆಸಿ ಬೆದರಿಕೆ ಒಡ್ಡಿದ್ದ ಸಮಯ ಚಾಸಾ4 ರವರು ಸದುದ್ದೇಶದಿಂದ ವಿಡಿಯೋ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಈ ವಿಡಿಯೋ ಅವರ ಕೈತಪ್ಪಿನಿಂದ ಸೆಂಡ್ ಆಗಿ ವೈರಲ್ ಆಗಿದೆ ಎಂದರೆ ಗೊತ್ತಿಲ್ಲ. ನಾನು ಸಹ ಆ ವಿಡಿಯೋವನ್ನು ನೋಡಿದ್ದೇನೆ ಎಂದರೆ ಸಾಕ್ಷಿ 5 ದಿನ ಆಗಿ ವೈರಲ್ ಆದ ನಂತರ ನೋಡಿದ್ದೇನೆ ಎಂದು ಹೇಳುತ್ತಾರೆ. ದಿಃ 18.7.2020 ರಂದು ಪೊಲೀಸರು ನಾನು ತೋರಿಸಿಕೊಟ್ಟ ಸ್ಥಳದಲ್ಲಿ ಚಾಸಾ6 ಮತ್ತು 7 ರವರ ಸಮಕ್ಷಮದಲ್ಲಿ ಬೆಳಿಗ್ಗೆ 10.00 ಗಂಟೆಯಿಂದ 10.45 ಗಂಟೆಯವರೆಗೆ ಮಹಜರ್ ಮಾಡಿ ನಿಪಿ4ಕ್ಕೆ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಅಲ್ಲದೆ ಈ ಸಂಬಂಧ ಅದೇ ದಿನ ಈ ಮೇಲೆ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಓದಿ ಹೇಳಿ ಕೇಳಲಾಗಿ ಸಾಕ್ಷಿ ನಿರಾಕರಿಸಿದ ಮೇರೆಗೆ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು. ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ 2ನೇ ಆರೋಪಿ ನನ್ನ ದೊಡ್ಡಪ್ಪ ಆಗಿದ್ದ ಕಾರಣ ಅವರಿಗೆ ಶಿಕ್ಷೆಯಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ. ಪಿ.ಎಂ ವಕೀಲರಿಂದಃ

ನನಗೆ ವಿಚಾರಗಳು ವಿಡಿಯೋ ನೋಡಿ 5 ದಿನಗಳ ನಂತರ ಗೊತ್ತಾಗಿರುತ್ತದೆ. ಚಾಸಾ2 ರವರನ್ನು ಆಸ್ಪತ್ರೆಗೆ 5 ದಿನಗಳ ನಂತರ ಕರೆದುಕೊಂಡು ಹೋಗುವಾಗ ನಾನು ಹೋಗಿದ್ದೆ. ಆ ದಿನ ಚಾಸಾ2 ರವರನ್ನು ಯಾರ ಕಾರಣಕ್ಕೆ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು ಎಂದು ಗೊತ್ತಿತ್ತು. ತಕ್ಷೀರು ಆದ ದಿನ ಚಾಸಾ2 ರವರ ಜೊತೆ ಯಾರೆಲ್ಲಾ ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಯಾವುದೇ ವಿಡಿಯೋವನ್ನು ಎಡಿಟ್ ಮಾಡುವ ಅವಕಾಶ ಇದೆ ಎಂದರೆ ಸರಿ. ಪ್ರಕರಣಕ್ಕೂ 1ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಎಡಿಟ್ ಮಾಡಿದ ವಿಡಿಯೋವನ್ನು ಬಳಸಿಕೊಂಡು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ.

ಪಾಟೀ ಸವಾಲುಃ 2ನೇ ಆರೋಪಿ ಪರ ಕುಮಾರಿ. ಎಸ್.ಜಿ.ಯು ವಕೀಲರಿಂದಃ

2ನೇ ಆರೋಪಿ ನಾನು ಹೇಳಿದಂತೆ ಯಾವುದೇ ತಪ್ಪು ಮಾಡಿಲ್ಲ ಎಂದರೆ ಸಾಕ್ಷಿ ನನಗೂ ಸಹ ಗೊತ್ತಿಲ್ಲ ಎಂದು ಹೇಳುತ್ತಾರೆ. 2ನೇ ಆರೋಪಿಗೂ ಪ್ರಕರಣಕ್ಕೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

(ಉಳಿಕೆ 1ನೇ ಆರೋಪಿ ಪರ ಪಾಟೀ ಸವಾಲನ್ನು 2ನೇ ಆರೋಪಿ ಪರ ಅಳವಡಿಸಿಕೊಂಡಿರುತ್ತಾರೆ)

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)